35

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1452
2. ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ್ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 20.03.2025
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 1985ರ ವಿಶೇಷ ನೇಮಕಾತಿ ನಿಯಮಾವಳಿಗಳು ಡಿಪಿಎಆರ್ 34 ಎಸ್‌ಇಸಿ/84ರ ಪ್ರಕಾರ ಪ್ರತಿ ವರ್ಷ ವಿಶ್ವವಿದ್ಯಾಲಯಗಳಿಂದ ಪ್ರಥಮ, ದ್ವಿತೀಯ ಮತ್ತು ತೃತೀಯ Rank ಪಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಗುಂಪು ಎ ಮತ್ತು ಬಿ ಹುದ್ದೆಗಳನ್ನು ನೀಡುವಲ್ಲಿ ಸರ್ಕಾರ ಕೈಗೊಂಡ ಕ್ರಮಗಳೇನು; ಕರ್ನಾಟಕ ಸಿವಿಲ್ ಸೇವೆ (ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ) ಅಭ್ಯರ್ಥಿಗಳಿಗೆ 1985ರ ಪತ್ರಾಂಕಿತ ಹುದ್ದೆಗಳನ್ನು ನೀಡುವಲ್ಲಿ ಸರ್ಕಾರ ಇಲ್ಲಿಯವರೆಗೂ ಕೈಗೊಂಡ ಕ್ರಮಗಳೇನು; | ಕರ್ನಾಟಕ ನಾಗರಿಕ ಸೇವಾ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೆಲವೊಂದು ಗುಂಪು-ಎ ಮತ್ತು ಗುಂಪು-ಬಿ ಹುದ್ದೆಗಳಿಗೆ ವಿಶೇಷ ನೇಮಕಾತಿ) ನಿಯಮಗಳು 1985ನ್ನು ಅಧಿಸೂಚನೆ ಸಂಖ್ಯೆ: ಸಿಆಸುಇ 34 ಸೆಹಿಮ 84, ದಿನಾಂಕ: 27.03.1985ರನ್ವಯ ಜಾರಿಗೊಳಿಸಲಾಗಿದೆ.<br><br>ಸದರಿ ನಿಯಮಗಳನ್ವಯ ನಿಗದಿಪಡಿಸಿರುವ ಹುದ್ದೆಯ ನೇರ ನೇಮಕಾತಿ ಕೋಟಾದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯ ಕ್ರಮವಾಗಿ ಶೇ. 15 ಮತ್ತು ಶೇ. 3ರ ಪ್ರಮಾಣಕ್ಕಿಂತ ಕಡಿಮೆ ಇರಬೇಕು. ಆ ಕೊರತೆ ಸದರಿ ನಿಯಮಗಳಡಿಯಲ್ಲಿ ನೇಮಕಾತಿ ಮಾಡುವ ಸಮಯದಲ್ಲಿಯೂ ಸಹ ಇರಬೇಕು; ಮತ್ತು ಸಂಬಂಧಿಸಿದ ವೃಂದಗಳಲ್ಲಿ ಸದರಿ ಕೊರತೆ ರಿಕ್ತಸ್ಥಾನಗಳು ನೇಮಕಾತಿ ಸಮಯದವರೆಗೂ ಮುಂದುವರೆದಿರಬೇಕು ಹಾಗೂ ನೇಮಕಾತಿ ಸಮಯದಲ್ಲಿಯೂ ಲಭ್ಯವಿರಬೇಕು.<br><br>ಈ ಎಲ್ಲಾ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ್ದಲ್ಲಿ, ಸರ್ಕಾರದ ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾಲಯಗಳಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಲ್ಲಿಯೇ ಮೊದಲ ಮೂರು ಸ್ಥಾನ ಪಡೆದ ಅಭ್ಯರ್ಥಿಗಳ ಮಾಹಿತಿಯನ್ನು ಪಡೆದು ಹುದ್ದೆಗಳ ಲಭ್ಯತೆ ಮತ್ತು ವಿವಿಧ ಹುದ್ದೆಗಳಲ್ಲಿ ಪ.ಜಾ. ಮತ್ತು ಪ.ಪಂ.ಗಳ ಪ್ರಾತಿನಿಧ್ಯತೆ ಆಧರಿಸಿ ಕೊರತೆ |

| | | |
|---|---|---|
| | | ರಿಕ್ತಸ್ಥಾನ ಉದ್ಭವವಾದ ಸಂದರ್ಭದಲ್ಲಿ ಮಾತ್ರ ನೇಮಕ ಮಾಡಲಾಗುತ್ತದೆ. |
| ಆ) | ಕ್ರಮ ಕೈಗೊಂಡಿದ್ದರೆ, 1985ರ ವಿಶೇಷ ನೇಮಕಾತಿ ನಿಯಮಾವಳಿ ಪ್ರಕಾರ 2008 ರಿಂದ 2025ರವರೆಗೆ ವರ್ಷವಾರು ಎಷ್ಟು ಅಭ್ಯರ್ಥಿಗಳಿಗೆ ಹುದ್ದೆಗಳನ್ನು ನೀಡಲಾಗಿದೆ ಹಾಗೂ 1985 ವಿಶೇಷ ನೇಮಕಾತಿ ನಿಯಮಾವಳಿ ಜಾರಿಯಲ್ಲಿರುವುದರಿಂದ ಹುದ್ದೆಗಳನ್ನು ನೀಡುವಲ್ಲಿ ಸರ್ಕಾರ ಏಕೆ ಕ್ರಮ ಕೈಗೊಂಡಿರುವುದಿಲ್ಲ; | ನಿಯಮಗಳು ಜಾರಿಗೆ ಬಂದ 1985ನೇ ಸಾಲಿನಿಂದ ಪ್ರಸ್ತುತದವರೆಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರವಾಗಿರುವ ಗ್ರೂಪ್-ಎ ಮತ್ತು ಬಿ ಹುದ್ದೆಗಳಿಗೆ ವಿವಿಧ ಸಾಲುಗಳಲ್ಲಿ ಒಟ್ಟು 95 ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಹಾಗೆಯೇ ಬೇರೆ ಬೇರೆ ಆಯ್ಕೆ ಮತ್ತು ನೇಮಕಾತಿ ಪ್ರಾಧಿಕಾರಗಳು ತಮ್ಮ ಇಲಾಖಾ ವ್ಯಾಪ್ತಿಯ ಹುದ್ದೆಗಳಿಗೆ 1985ರ ನಿಯಮಗಳನ್ವಯ ನೇಮಕ ಮಾಡಿವೆ.<br><br>1985ನೇ ಸಾಲಿನಿಂದ ಪ್ರಸ್ತುತದವರೆಗೂ ಕಾಲಾನುಕ್ರಮದಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆ ಮತ್ತು ಬೆಳವಣಿಗೆಗಳಾಗಿದ್ದು, ವಿವಿಧ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯ ನಿಯಮಗಳಲ್ಲಿ ನಿಗದಿ ಪಡಿಸಿರುವ ಶೇ.15 ಮತ್ತು ಶೇ.3ರ ಪ್ರಮಾಣಕ್ಕಿಂತ ಹೆಚ್ಚಿರುತ್ತದೆ. 2008 ರಿಂದ ಯಾವುದೇ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕೊರತೆ ರಿಕ್ತಸ್ಥಾನಗಳು ವರದಿಯಾಗಿರುವುದಿಲ್ಲ. ಅಲ್ಲದೇ, ಬ್ಯಾಕ್-ಲಾಗ್ ಹುದ್ದೆಗಳ ನೇಮಕಾತಿ ಮತ್ತು ಕರ್ನಾಟಕ ಲೋಕಸೇವಾ ಆಯೋಗ ಮತ್ತು ಇನ್ನಿತರ ಆಯ್ಕೆ ಪ್ರಾಧಿಕಾರಗಳಿಂದ ನೇರ ನೇಮಕಾತಿಗಳು ನಿಯಮಿತವಾಗಿ ನಡೆಯುತ್ತಿರುವುದರಿಂದಲೂ ಕೊರತೆ ರಿಕ್ತಸ್ಥಾನಗಳು ವರದಿಯಾಗುತ್ತಿಲ್ಲ. |
| ಇ) | ಡಿಪಿಎಆರ್ ಇಲಾಖೆ ಅಭ್ಯರ್ಥಿಗಳ ನೈಜತೆ ಪರಿಶೀಲಿಸಿದ್ದರೂ ಸಹ ಇಲ್ಲಿಯವರೆಗೆ ಎ ಮತ್ತು ಬಿ ಹುದ್ದೆಗಳನ್ನು ನೇಮಕಾತಿ ಮಾಡದೆ 1985ರಲ್ಲಿ Rank ಪಡೆದ ಅಭ್ಯರ್ಥಿಗಳ ವಯೋಮಿತಿ ಮೀರುತ್ತಿರುವುದರಿಂದ ನೇಮಕಾತಿ ಮಾಡಿಕೊಳ್ಳುವಲ್ಲಿ ಸರ್ಕಾರ ತೆಗೆದುಕೊಂಡ ನಿಲುವುಗಳೇನು; | ಒಂದು ಸಾಲಿನ ಕೊರತೆ ರಿಕ್ತಸ್ಥಾನದ ಹುದ್ದೆಗಳಿಗೆ ಮತ್ತೊಂದು ಸಾಲಿನ ಅಭ್ಯರ್ಥಿಯನ್ನು ಪರಿಗಣಿಸಲು ನಿಯಮಾನುಸಾರ ಅವಕಾಶವಿಲ್ಲದಿರುವುದರಿಂದ, 1985ನೇ ಸಾಲಿನಲ್ಲಿ Rank ಪಡೆದ ಅಭ್ಯರ್ಥಿಯನ್ನು ಬೇರೆ ಸಾಲಿನ ಹುದ್ದೆಯ ನೇಮಕಾತಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ. |

| | | | |
|---|---|---|---|
| ಈ) | 1985ರ ವಿಶೇಷ ನಿಯಮಾವಳಿ ಪ್ರಕಾರ ಪ್ರತಿ ವರ್ಷ ವಿಶ್ವವಿದ್ಯಾಲಯಗಳಿಂದ ಉತ್ತೀರ್ಣರಾಗಿ ಬರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪ್ರಥಮ, ದ್ವಿತೀಯ ಮತ್ತು ತೃತೀಯ Rank ಪಡೆದ ಅಭ್ಯರ್ಥಿಗಳ ಸಂಖ್ಯೆ ಎಷ್ಟು ಹಾಗೂ Rank ಪಡೆದ ಅಭ್ಯರ್ಥಿಗಳ ಪಟ್ಟಿ ತಯಾರಿಸಲು ಡಿಪಿಎಆರ್ ಹಾಗೂ ಸರ್ಕಾರ ತೆಗೆದುಕೊಂಡ ಸಮಯ ಹಾಗೂ ಅಭ್ಯರ್ಥಿಗಳ ಪಟ್ಟಿಯಲ್ಲಿರುವ ಹೆಸರುಗಳನ್ನು ಪ್ರಕಟಿಸಲು ಕೈಗೊಂಡ ಕ್ರಮಗಳೇನು? | ಪ್ರಸ್ತುತ ವಿವಿಧ ಹುದ್ದೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಪ್ರಾತಿನಿಧ್ಯ ಇರುವುದರಿ ನಿಯಮಗಳಲ್ಲಿ ನಿಗದಿಪಡಿಸಿರುವ ಮಿತಿಗೆ ಅನುಗುಣವಾಗಿರುವುದರಿಂದ ಕೊರತೆ ರಿಕ್ತಸ್ಥಾನಗಳು ಲಭ್ಯವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ, ಅಭ್ಯರ್ಥಿಗಳ ಪಟ್ಟಿ ತಯಾರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಿಆಸುಇ 34 ಸೇವನೆ 2025

(ಸಿದ್ದರಾಮಯ್ಯ)
**ಮುಖ್ಯಮಂತ್ರಿ**